ದಿನಾಂಕ: 07.11.2020 ರಂದು ಬೆಳಗ್ಗೆ 11.00 ಗಂಟೆಗೆ ಕಾಮಾಕ್ಷಿಪಾಳ್ಯ ವಾರ್ಡ್ ನಂ. 101 ರಲ್ಲಿ ಶ್ರೀ ಎ.ಎಸ್. ರಮೇಶ್, ನೋಡಲ್ ಅಧಿಕಾರಿ ರವರ ಅಧ್ಯಕ್ಷತೆಯಲ್ಲಿ ನಡೆದ ಸಭೆಯ ನಡುವಳಿಗಳ ವಿವರ:-

**ಹಾಜರಿದ್ದ ಪಾಲಿಕೆಯ ಅಧಿಕಾರಿಗಳು:-**

1. ಶ್ರೀ ನಾರಾಯಣಿ, ಸಹಾಯಕ ಅಭಿಯಂತರರು, ವಾರ್ಡ್ ನಂ. 101 ಕಾಮಾಕ್ಷಿಪಾಳ್ಯ
2. ಶ್ರೀಮತಿ ರಾಜೇಶ್ವರಿ, ಹಿರಿಯ ಆರೋಗ್ಯ ಪರಿವೀಕ್ಷಕರು.
3. ಶ್ರೀಮತಿ ರೂಪಶ್ರೀ, ಕಿರಿಯ ಆರೋಗ್ಯ ಪರಿವೀಕ್ಷಕರು.
4. ಶೇಖರ್‌ನಾಯ್ಕ್ [ಸಹಾಯಕ ಅಭಿಯಂತರರು, ಬಿ.ಡ್ಬ್ಲ್ಯು.ಎಸ್.ಎಸ್.ಬಿ.]
5. ರವೀಂದ್ರನಾಥ.ಎಸ್. ಸದಸ್ಯರು,
6. ಎಲ್.ಜಿ. ಗಂಗಯ್ಯ, ಸದಸ್ಯರು,
7. ಅನಿಲ್ ರಂಗಣ್ಣ, ಸದಸ್ಯರು
8. ಕೆ. ಉಮಾಶಂಕರ್
9. ಸಿದ್ದರಾಜು, ಸಹಾಯಕ ಅಭಿಯಂತರರು, ಬೆಸ್ಕಾಂ,
10. ಶ್ರೀನಿವಾಸ್.ಎ.
11. ಮಧುಸೂಧ,ಎ.ಎಸ್.
12. ರಾಜೇಶ್, ಸದಸ್ಯರು,
13. ಉಮೇಶ್ , ಸದಸ್ಯರು,

ದಿನಾಂಕ: 17.10.2020 ರಂದು ನಡೆದ ಸಭೆಯಲ್ಲಿ ಹಲವಾರು ವಿಷಯಗಳನ್ನು ಚರ್ಚಿಸಿ, ಅದಕ್ಕೆ ಸಂಬಂಧಪಟ್ಟ ವಿಷಯಗಳಿಗೆ ಪರಿಹಾರ ತೆಗೆದುಕೊಳ್ಳಲಾಗಿರುತ್ತದೆ. ಹಾಗು ದಿನಾಂಕ: 07.11.2020ರಂದು ಬೆಳಗ್ಗೆ 11.00 ಗಂಟೆಗೆ ವಾರ್ಡ್ ನಂ. 101 ಕಾಮಾಕ್ಷಿಪಾಳ್ಯ **ಎಸ್.ಬಿ.ಐ. ಆಫಿಸರ್ಸ್ ಸಮುಧಾಯ ಭವನ, ಎಸ್.ಬಿ.ಐ. ಕಾಲೋನಿ, ಕಾಮಾಕ್ಷಿಪಾಳ್ಯ,** ಇಲ್ಲಿ ಪಾಲಿಕೆ ಅಧಿಕಾರಿಗಳೊಂದಿಗೆ ಸಭೆಯನ್ನು ಕೈಗೊಂಡು ಈ ಕೆಳಗಿನ ವಿಷಯಗಳನ್ನು ಚರ್ಚಿಸಲಾಯಿತು.

1. ಶ್ರೀ ಎಸ್. ರವೀಂದ್ರ, ಸದಸ್ಯರು, ರವರು ಮಾತನಾಡಿ ಕಳೆದ ಸಭೆಯಲ್ಲಿ ತಿಳಿಸಿದ್ದ ದೂರಿನ ಕುರಿತು [ಎಸ್.ಬಿ.ಐ. ಕಾಲೋನಿಯ ಕುಡಿಯುವ ನೀರಿನ ಪೈಪ್‌ಗಳ ಬಗ್ಗೆ] ತಿಳಿಸಿದರು.
   ಬಿ.ಡ್ಬ್ಲ್ಯು.ಎಸ್.ಎಸ್.ಬಿ. ಸಹಾಯಕ ಅಭಿಯಂತರರಾದ ಶೇಖರ್ ರವರು ಸ್ಥಳ ಪರಿಶೀಲಿಸಿ ಸಮಸ್ಯೆ ಬಗೆ ಹರಿಸುವುದಾಗಿ ತಿಳಿಸಿದರು.
2. ಶ್ರೀ ಗಂಗಯ್ಯ ರವರು ಮಾತನಾಡಿ ವಾರ್ಡಿನ ಪೂರ್ತಿ ಸೋಂಕು ನಿವಾರಣೆಯನ್ನು ಸಮರ್ಪಕವಾಗಿ ನಿರ್ವಹಿಸಿಲ್ಲವೆಂದು ತಿಳಿಸಿದರು.
   ಆರೋಗ್ಯ ಇಲಾಖೆಯ ಅಧಿಕಾರಿಗಳು ಸೂಕ್ತ ಕ್ರಮ ಕೈಗೊಂಡು ನಾಳೆಯಿಂದಲೇ ಸಮರ್ಪಕವಾಗಿ ಸೋಂಕು ನಿವಾರಕವನ್ನು ವಾರ್ಡಿನ ಪೂರ್ತಿ ಸಿಂಪಡಿಸಲು ಕ್ರಮ ಕೈಗೊಳ್ಳಲಾಗುವುದೆಂದು ತಿಳಿಸಿದರು.
3. ನೋಡಲ್ ಅಧಿಕಾರಿ ರವರು ಮಾತನಾಡಿ ಕಳೆದ ಸಭೆಯ ದೂರಿನಲ್ಲಿ ಒಂದಾಗಿದ್ದ ಕೆ.ಹೆಚ್.ಬಿ. ಕಾಲೋನಿಯ ಆಟದ ಮೈದಾನದ ಸುತ್ತ ಸ್ವಚ್ಚತಾ ಕಾರ್ಯವನ್ನು ಮಾಡಿ ಕಸ ಕಡ್ಡಿಯನ್ನು ತೆಗೆದು ಶುಚಿಗೊಳಿಸಲಾಗಿದೆ ಎಂದು ತಿಳಿಸಿದರು.
4. ಶ್ರೀ ರವೀಂದ್ರ ರವರು ಮಾತನಾಡಿ ರೈನ್ ಹಾರ್ವೆಸ್ಟಿಂಗ್ ಅಳವಡಿಸಿ ವಾರ್ಡಿನೆಲ್ಲಡೆ ಹಾಗೂ ಅದರಿಂದ ಆಗುವ ಅನುಕೂಲದ ಕುರಿತು ಹಾಗೂ ಅಳವಡಿಸಲು ಕೋರಿದರು. ಅದಕ್ಕೆ ನೋಡಲ್ ಅಧಿಕಾರಿಗಳು ಮಾತನಾಡಿ ಸದಸ್ಯರ ಸಲಹೆಯನ್ನು ಸ್ವಾಗತಿಸಿ, ರೈನ್ ಹಾರ್ವೆಸ್ಟಿಂಗ್‌ನಿಂದಾಗುವ ಕೆಲ ಅನಾನುಕೂಲಗಳನ್ನು ತಿಳಿಸಿದರು, ಕೆಲವು ಗುರುತಿಸಿರುವ ಸ್ಥಳಗಳಲ್ಲಿ ಅಳವಡಿಸಲು ಸೂಕ್ತ ಕ್ರಮ ಕೈಗೊಳ್ಳುವುದಾಗಿ ಸೂಚಿಸಿದರು.

**ಪು.ತಿ.ನೋ.**

5. ನೋಡಲ್ ಅಧಿಕಾರಿಗಳು ಮಾತನಾಡಿ ವಾರ್ಡಿನ ಕೆಲವು ರಸ್ತೆಗಳನ್ನು ಖುದ್ದಾಗಿ ಪರಿಶೀಲಿಸಿದ್ದು, ಕಸದ ಪೂರೈಕೆ ಸಮರ್ಪಕವಾಗಿ ನಿರ್ವಹಿಸುವಂತೆ ಸಂಬಂಧಿಸಿದ ಅಧಿಕಾರಿಗಳಿಗೆ ಸೂಚಿಸಿದರು.
6. ಸದಸ್ಯರು ಮಾತನಾಡಿ ಎಲ್ಲೆಂದರಲ್ಲಿ ಕಸ ಎಸೆಯುವವರ ವಿರುದ್ಧ ಸೂಕ್ತ ಕ್ರಮ ಕೈಗೊಳ್ಳುವಂತೆ ಹಾಗೂ ಕೆಲವು ಬ್ಲಾಕ್ ಸ್ಪಾಟ್‌ಗಳನ್ನು ತೆರವುಗೊಳಿಸುವಂತೆ [ಎಸ್.ಬಿ.ಐ. ಕಾಲೋನಿಯಲ್ಲಿ] ತಿಳಿಸಿದರು. ನೋಡಲ್ ಅಧಿಕಾರಿಗಳು ಮಾತನಾಡಿ ಮಾರ್ಷಲ್‌ಗಳ ಸಹಾಯದಿಂದ ಕಸ ಎಸೆಯುವವರ ವಿರುದ್ಧ ಕ್ರಮ ಕೈಗೊಳ್ಳುವಂತೆ ಆರೋಗ್ಯ ಅಧಿಕಾರಿಗಳಿಗೆ ಸೂಚಿಸಿದರು.
7. ಶ್ರೀ ಉಮಾಶಂಕರ್ ರವರು ಮಾತನಾಡಿ ಸಿ.ಸಿ. ಕ್ಯಾಮರಗಳನ್ನು ರಿಪೇರಿ ಮಾಡುವಂತೆ ಕೋರಿದರು. ಸಂಬಂಧಪಟ್ಟ ಅಧಿಕಾರಿಗಳಿಗೆ ಕ್ರಮ ವಹಿಸುವಂತೆ ನೋಡಲ್ ಅಧಿಕಾರಿಗಳು ಸೂಚಿಸಿದರು.
8. ಆಲದ ಮರ ಪಾರ್ಕಿನ ಸಿವಿಲ್ ಕಾಮಗಾರಿಯ ಗುಣಮಟ್ಟವನ್ನು ಕಾಪಾಡುವಂತೆ ಪ್ರಾಜೆಕ್ಟ್ ವಿಭಾಗಕ್ಕೆ ತಿಳಿಸಲಾಯಿತು ಹಾಗೂ ನೋಡಲ್ ಅಧಿಕಾರಿಗಳು ಸಂಬಂಧಪಟ್ಟ ಕಾರ್ಯಪಾಲಕ ಅಭಿಯಂತರರು ರವರಿಗೆ ಪರಿವೀಕ್ಷಣೆ ಮಾಡುವಂತೆ ತಿಳಿಸಿದರು.
9. ವಾರ್ಡ್ ವ್ಯಾಪ್ತಿಯ ಕೆಲವು ಸ್ಥಳಗಳಲ್ಲಿ ಸೊಳ್ಳೆಗಳ ಹಾವಳಿ ಹೆಚ್ಚಾಗಿದ್ದು, ಸದರಿ ಸ್ಥಳಗಳಿಗೆ ಸಂಭಪಟ್ಟ ಆರೋಗ್ಯ ಅಧಿಕಾರಿಗಳಿಗೆ ಫಾಗಿಂಗ್ ಮಾಡುವಂತೆ ಸೂಚಿಸಿದರು.
10. ಮದುವೆ ಹಾಗೂ ಇತ್ಯಾದಿ ಕಾರ್ಯಕ್ರಮಗಳಿಗೆ ಶೀಘ್ರವಾಗಿ ಅನುಮತಿ ನೀಡುವಂತೆ ಸೂಚಿಸಿದರು.
11. ಆಲದ ಮರ ಪಾರ್ಕಿನಲ್ಲಿ ಲ್ಯಾಂಡ್ ಸ್ಕೇಪಿಂಗ್ ಮಾಡಲು ಸದಸ್ಯರಾದ ಶ್ರೀ ಅನಿಲ್‌ರಂಗಣ್ಣ ರವರು ತಿಳಿಸಿದರು. ಅದರಂತೆ ಸಂಬಂಧಪಟ್ಟ ಅಧಿಕಾರಿಗಳು ಗಮನ ಹರಿಸುವಂತೆ ನೋಡಲ್ ಅಧಿಕಾರಿಗಳು ಸೂಚಿಸಿದರು.
12. ವಾರ್ಡ್ ವ್ಯಾಪ್ತಿಯ ಶೋಲ್ಡರ್ ಡ್ರೈನ್ ಸ್ವಚ್ಛಗೊಳಿಸುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ನೋಡಲ್ ಅಧಿಕಾರಿಗಳು ಸೂಚಿಸಿದರು.
13. ಪ್ರತಿ ಮನೆಗಳಲ್ಲಿ ರೂಫ್ ಟಾಪ್ ಹಾರ್ವೆಸ್ಟಿಂಗ್ ಅಳವಡಿಸುವಂತೆ ನೋಡಲ್ ಅಧಿಕಾರಿಗಳು ಸೂಚಿಸಿದರು.
14. ವಾರ್ಡ್ ವ್ಯಾಪ್ತಿಯ ಪಾರ್ಕ್‌ಗಳಲ್ಲಿ ಸೆಕ್ಯೂರಿಟಿ ಗಾರ್ಡ್‌ಗಳನ್ನು ನಿಯೋಜಿಸಲು ತೋಟಗಾರಿಕೆ ಇಲಾಖೆಯ ಅಧಿಕಾರಿಗಳಿಗೆ ತಿಳಿಸಲಾಯಿತು.

ಸದಸ್ಯ ಕಾರ್ಯದರ್ಶಿಗಳು ಸಭೆಯಲ್ಲಿ ಹಾಜರಿದ್ದ ಮಾನ್ಯ ಅಧ್ಯಕ್ಷರಿಗೆ ವಾರ್ಡ್ ಸಮಿತಿ ಸದಸ್ಯರುಗಳಿಗೆ ಮತ್ತು ವಿವಿಧ ಇಲಾಖೆಯ ಅಧಿಕಾರಿಗಳಿಗೆ ವಂದನೆಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

ನೋಡಲ್ ಅಧಿಕಾರಿಗಳು
ವಾರ್ಡ್ ನಂ. 101

ಸದಸ್ಯ ಕಾರ್ಯದರ್ಶಿ
ವಾರ್ಡ್ ಸಮಿತಿ
ವಾರ್ಡ್ ನಂ. 101